# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018

ರಾಷ್ಟ್ರೀಯ ಸೇವಾ ಯೋಜನೆ

ದೂರವಾಣಿ ಸಂ : 0831–2405468

ಕುಲಸಚಿವರು

ಫ್ಯಾಕ್ಸ್ ಸಂ : 0831–2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ–ಸು.ಮ.ವ/39/2018-19/ 2889     ದಿನಾಂಕ: 26 JUL 2019

## :ಸುತ್ತೋಲೆ:

**ವಿಷಯ :** ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣಮಹೋತ್ಸವವನ್ನು ಆಚರಿಸುವ ಬಗ್ಗೆ.

ಉಲ್ಲೇಖ: ಯುಸೇಇ/ರಾಸೇಯೋ/37/2018–19/203 ದಿನಾಂಕ: 17.07.2019

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಸೇವಾ ಯೋಜನೆಯು 1969ರ ಸೆಪ್ಟೆಂಬರ್ 24 ರಂದು ಅನುಷ್ಠಾನಗೊಂಡು ಸೆಪ್ಟೆಂಬರ್ 24ರಂದು 2019ಕ್ಕೆ 50 ವರ್ಷ ಪೂರ್ಣವಾಗುತ್ತದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಅಧಿನಕ್ಕೊಳಪಡುವ ಎಲ್ಲಾ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯಗಳು, ಈ ಬಗ್ಗೆ ತಮ್ಮ ಮಹಾವಿದ್ಯಾಲಯ ಮಟ್ಟದಲ್ಲಿ ಯೋಜನೆಯೊಂದನ್ನು ರೂಪಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ. ಇದಕ್ಕೆ ಸಂಬಂಧಿಸಿದಂತೆ. ರಾಜ್ಯಮಟ್ಟದ ಸಲಹಾ ಸಮಿತಿ ಈ ಕೆಳಗಿನ ಸಲಹೆಗಳನ್ನು ನೀಡಿದೆ.

1. 20 ರಿಂದ 24 ಸೆಪ್ಟೆಂಬರ್ 2019 ರವರೆಗೆ ಸುವರ್ಣ ಮಹೋತ್ಸವವನ್ನು ಕಾರ್ಯಕ್ರಮಗಳನ್ನು ಕಾಲೇಜು ಮಟ್ಟದಲ್ಲಿ ಏರ್ಪಡಿಸುವದು.
2. ಸುವರ್ಣ ಮಹೋತ್ಸವದ ನೆನಪಿಗಾಗಿ ಕಾಲೇಜುಗಳಲ್ಲಿ ವಿಶಿಷ್ಠ ಯೋಜನೆಯೊಂದನ್ನು ಅನುಷ್ಠಾನಗೊಳಿಸುವುದು. (ಉದಾ: ಕಾಂಪೌಂಡ್, ಹಾಲ್, ಶೌಚಾಲಯ ನಿರ್ಮಾಣ, ಶಾಲಾ ಕಾಲೇಜುಗಳಿಗೆ ನೆನಪಿನ ಕೊಠಡಿ ನಿರ್ಮಾಣ ಇತ್ಯಾದಿ.
3. ಗಿಡ ನೆಡುವಿಕೆ, ರಕ್ತದಾನ, ದೇಹದ ಅಂಗಾಂಗದಾನ, ಆರೋಗ್ಯ ಶಿಬಿರಗಳನ್ನು ನಡೆಸುವುದು.
4. ಈ ಸಂದರ್ಭದಲ್ಲಿ ಸ್ಥಳೀಯ ಶಾಲಾ ಕಾಲೇಜುಗಳಲ್ಲಿ ಉಪನ್ಯಾಸ, ವಿಚಾರ ಸಂಕಿರಣಗಳು, ಭಾವೈಕ್ಯತಾ ಶಿಬಿರ, ಸ್ಪರ್ಧೆಗಳು, ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
5. ಎನ್.ಎಸ್.ಎಸ್.ಗಾಗಿ ದುಡಿದ ಪರಿಸರದ ಹಿರಿಯನ್ನು ಗೌರವಿಸುವುದು.
6. ಸ್ಥಳೀಯ ಅವಶ್ಯಕತೆಗಳನ್ನು ಗಮನಿಸಿ ಕಾರ್ಯಕ್ರಮಗಳನ್ನು ರೂಪಿಸುವುದು.

ತಮ್ಮ ಕಾಲೇಜುಗಳಲ್ಲಿ ನಡೆದ ಎನ್.ಎಸ್.ಎಸ್. ಸುವರ್ಣ ಮಹೋತ್ಸವದ ಕಾರ್ಯಕ್ರಮದ ಸಂಕ್ಷಿಪ್ತ ವರದಿಯನ್ನು ದಿನಾಂಕ: 30.09.2019 ರೊಳಗೆ (E-mail-ID:nss@vtu.ac.in) ವಿ.ತಾ.ವಿ.ಯ ಎನ್.ಎಸ್.ಎಸ್.ಕೋಶಕ್ಕೆ ಕಡ್ಡಾಯವಾಗಿ ಸಲ್ಲಿಸುವಂತೆ. ರಾ.ಸೆ.ಯೋ. ಕಾರ್ಯಕ್ರಮಾಧಿಕಾರಿಗಳಿಗೆ ಈ ಮೂಲಕ ನಿರ್ದೇಶನ ನೀಡಲು ತಮ್ಮನ್ನು ಕೋರಲಾಗಿದೆ.

ವಂದನೆಗಳೊಂದಿಗೆ,

23.7.2019

ಕುಲಸಚಿವರು

**ಇವರಿಗೆ,**

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು.
ವಿ.ತಾ.ವಿ. ಅಧಿನಕ್ಕೊಳಪಡುವ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ
ಮಹಾವಿದ್ಯಾಲಯಗಳು.

**ಪ್ರತಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್.ಅಧಿಕಾರಿ, ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ ರಾ.ಸೇ.ಯೋ ಕೋಶ ಯು.ಸ.ಮತ್ತು ಕ್ರೀಡಾ ಇಲಾಖೆ. ಬೆಂಗಳೂರು.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಚೇರಿ ಪ್ರತಿ.